**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ. 1979/2023**

| | | |
|---|---|---|
| ಸಾಕ್ಷಿದಾರರ ಹೆಸರು | : ರಘು ಪಿ.ಎಸ್. | ಪ್ರಾಸಾ-4 |
| ತಂದೆಯ ಹೆಸರು | : ಶಂಕರಪ್ಪ | ಚಾಸಾ-11 |
| ವಯಸ್ಸು | : 30 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಸಿ. 127 | ದಿನಾಂಕಃ 16.05.2025. |
| ವಾಸಸ್ಥಳ | : ಬಣಕಲ್ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು 2016 ರಿಂದ 2024 ರವರೆಗೆ ಬಣಕಲ್ ಪೋಲಿಸ್ ಠಾಣೆಯಲ್ಲಿ ಪಿ.ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ11.05.2023 ರಂದು ನಾನು ಚಾಸಾ-10 ರವರ ಜೊತೆಯಲ್ಲಿ ಅವರ ಜೀಪಿನ ಚಾಲಕನಾಗಿ ಕರ್ತವ್ಯದಲ್ಲಿ ಇದ್ದಾಗ ದಿನಾಂಕಃ12.05.2023 ರಂದು ರಾತ್ರಿ 12.30 ಗಂಟೆಗೆ ಬಣಕಲ್ ನಿಂದ ಕೊಟ್ಟಿಗೆಹಾರದ ಕಡೆಗೆ ಹೋಗುತ್ತಿರುವಾಗ, ನಂತರ ಕೊಟ್ಟಿಗೆಹಾರ ಮತ್ತು ಬಾಳೂರು ಕಡೆ ಗಸ್ತು ಕಾರ್ಯಾಚರಣೆ ಮುಗಿಸಿಕೊಂಡು ಬೆಳಗಿನಜಾವ ಸುಮಾರು 3.30 ಗಂಟೆಗೆ ಬಣಕಲ್‌ನ ಎನ್.ಹೆಚ್. 73 ಹೆದ್ದಾರಿಯಲ್ಲಿ ವಾಪಾಸ್ಸಾಗುತ್ತಿರುವಾಗ ಅಲ್ಲೇ ಇದ್ದ ಮಸೀದಿಯ ಪಕ್ಕ ಓರ್ವ ವ್ಯಕ್ತಿ ಬಿದ್ದಿರುವುದು ಕಂಡುಬಂದಿದ್ದು, ಅದನ್ನು ನೋಡಿ ನಾನು ಮತ್ತು ಚಾಸಾ-10 ರವರು ಜೀಪನ್ನು ನಿಲ್ಲಿಸಿ ಹತ್ತಿರ ಹೋಗಿ ನೋಡಲಾಗಿ ಸದರಿ ವ್ಯಕ್ತಿಯು ಮೃತಪಟ್ಟಿರುವುದು ಕಂಡುಬಂದಿರುತ್ತದೆ.

ನಂತರ ನಾವು ಬಣಕಲ್ ಪೊಲೀಸ್ ಠಾಣೆಗೆ ಮುಂದಿನ ಕಾನೂನು ಕ್ರಮ ಕೈಗೊಳ್ಳಲು ವಿಚಾರವನ್ನು ತಿಳಿಸಿರುತ್ತೇವೆ. ನಂತರ ಮೃತ ವ್ಯಕ್ತಿಯನ್ನು ಪರಿಶೀಲಿಸಿದಾಗ, ಆತನ ಜೇಬಿನಲ್ಲಿ ಆಧಾರ ಕಾರ್ಡ್ ಮತ್ತು ಒಂದು ಒಂದು ಫೋಟೋ ದೊರಕಿರುತ್ತದೆ. ಅದನ್ನು ಪರಿಶೀಲಿಸಲಾಗಿ ಮೃತ ವ್ಯಕ್ತಿ ರಾಯಚೂರು ಜಿಲ್ಲೆಯ ತೋರಣಗುಡ್ಡೆಯ ವಾಸಿಯಾದ ಮಂಜುನಾಥ ಎಂದು ತಿಳಿದುಬಂದಿರುತ್ತದೆ. ಮೃತರ ವಿಳಾಸವನ್ನು ಕುರಿತು ವಿಚಾರಿಸಿದಾಗ ಅವರ ಸಹೋದರಿಯಾದ ಚಾಸಾ-8 ರವರ ದೂರವಾಣಿ ಸಂಖ್ಯೆ ದೊರಕಿದ್ದು, ನಂತರ ಅವರಿಗೆ ಕರೆ ಮಾಡಿ ಮೃತ ವ್ಯಕ್ತಿಯ ಆಧಾರ ಕಾರ್ಡ್ ಮತ್ತು ಫೋಟೋವನ್ನು ಅವರಿಗೆ ಕಳುಹಿಸಲಾಗಿ, ಚಾಸಾ-8 ರವರು ಸದರಿ ಫೋಟೋ ಮತ್ತು ಆಧಾರ ಕಾರ್ಡನ್ನು ನೋಡಿ ಮೃತ ವ್ಯಕ್ತಿಯು ಚಾಸಾ-8 ರವರ ಸಹೋದರ ಎಂದು ಗುರುತಿಸಿರುತ್ತಾರೆ.

ನಂತರ ಮೃತ ದೇಹವನ್ನು ಬಣಕಲ್ ನಿಂದ ಮೂಡಿಗೆರೆಯ ಎಂ.ಜಿ.ಎಂ., ಆಸ್ಪತ್ರೆಯ ಶವಾಗಾರಕ್ಕೆ ಸಾಗಿಸಲಾಗಿರುತ್ತದೆ. ನಂತರ ದಿನಾಂಕಃ12.05.2023 ರಂದು ಚಾಸಾ-8 ರವರು ಅವರ ಸಂಬಂಧಿಕರಾದ ಚಾಸಾ-1 ರವರೊಂದಿಗೆ ಬಂದು ಬಣಕಲ್ ಪೊಲೀಸ್ ಠಾಣೆಗೆ ಬಂದು ದೂರನ್ನು ದಾಖಲಿಸಿರುತ್ತಾರೆ. ದಿನಾಂಕಃ14.05.2023 ರಂದು ಚಾಸಾ-18 ರವರು ಸ್ಥಳ ಪಂಚನಾಮೆ ಮಾಡಲು ಸ್ಥಳವನ್ನು ತೋರಿಸಲು ನನ್ನನ್ನು ಕರೆದ ಮೇರೆಗೆ, ನಾನು ಸದರಿ ಸ್ಥಳವು ಎನ್.ಹೆಚ್. 73

ರಸ್ತೆಯ ಮತ್ತಿಕಟ್ಟೆ ಸರ್ಕಲನ್ನು ತೋರಿಸಿರುತ್ತೇನೆ. ಸ್ಥಳ ಪಂಚನಾಮೆ ಕಾಲದಲ್ಲಿ ಪಂಚರಾಗಿ ಚಾಸಾ-5 ಮತ್ತು 6 ರವರು ಹಾಜರಿರುತ್ತಾರೆ. ಸದರಿ ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿ, ಛಾಯಾಚಿತ್ರವನ್ನು ತೆಗೆದಿರುತ್ತಾರೆ.

ದಿನಾಂಕಃ12.05.2023 ರಂದು ಚಾಸಾ-6 ರವರು ಬೆಳಗಿನ ಜಾವ 3.15 ಗಂಟೆಗೆ ಮಸೀದಿಗೆ ಹೋಗುವಾಗ ಕೊಟ್ಟಿಗೆಹಾರ ಕಡೆಯಿಂದ ಬರುತ್ತಿದ್ದ ಕೆಎ-21-ಸಿ-4813 ಏಸರ್ ವಾಹನದ ಚಾಲಕನು ಅಜಾಗರೂಕತೆಯಿಂದ ವಾಹನವನ್ನು ಚಾಲನೆ ಮಾಡಿಕೊಂಡು ಬಂದು ಸದರಿ ವ್ಯಕ್ತಿಗೆ ಡಿಕ್ಕಿ ಹೊಡೆದ ಪರಿಣಾಮ ಸದರಿ ವ್ಯಕ್ತಿಯು ಮೃತಪಟ್ಟಿರುತ್ತಾರೆ ಎಂದು ಚಾಸಾ-8 ರವರು ಸ್ಥಳ ಪಂಚನಾಮೆ ಕಾಲದಲ್ಲಿ ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ. ಅದೇ ದಿನ ನಾನು ಬಣಕಲ್ ಪೊಲೀಸ್ ಠಾಣೆಯಲ್ಲಿ ಚಾಸಾ-18 ರವರ ಸಮಕ್ಷಮದಲ್ಲಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಲಾಗಿ, ಅದನ್ನು ಗುರುತಿಸಿದ್ದು, ಸದರಿ ಮಹಜರನ್ನು ನಿಪಿ-10 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಲಾಗಿ, ಅದರಲ್ಲಿ ತಮ್ಮ ಇರುವಿಕೆಯ ಬಗ್ಗೆ ಗುರುತಿಸಿರುತ್ತಾರೆ. ಸದರಿ ಛಾಯಾಚಿತ್ರವನ್ನು ನಿಪಿ-11 ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-6 ರ ಫೋಟೋದಲ್ಲಿ ಇರುವ ಮೃತದೇಹವನ್ನು ನೋಡಿ ಗುರುತಿಸಿರುತ್ತಾರೆ.

## <u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎ.ಎಂ., ವಕೀಲರಿಂದಃ</u>

ನಾನು ಇಲಾಖಾ ವಾಹನವಾದ ಕೆಎ-18-ಜಿ-806 ರಲ್ಲಿ ಗಸ್ತು ಹೋಗಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ-10 ರವರು ಇದ್ದರು. ಆ ದಿನ ಈ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನಾನು ನೋಡಿರುವುದಿಲ್ಲ ಅಂದರೆ ಸರಿ. ನಾನು ಮೃತ ವ್ಯಕ್ತಿಯ ಪ್ಯಾಂಟ್ ಮತ್ತು ಶರ್ಟ್ ನ ಜೇಬುಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ಮೃತವ್ಯಕ್ತಿಯ ಶರ್ಟಿನ ಜೇಬನ್ನು ಪರಿಶೀಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಆ ದಿನ ಕೊಟ್ಟಿಗೆಹಾರದ ಕಡೆ ಗಸ್ತು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಮೃತ ದೇಹವನ್ನು ಶವಾಗಾರಕ್ಕೆ ಸಾಗಿಸುವಾಗ ಬೆಳಗಿನ ಜಾವ 4.00 ಗಂಟೆ ಸಮಯವಾಗಿರುತ್ತದೆ. ಸದರಿ ಸಮಯದಲ್ಲಿ ತನ್ನ ಜೊತೆ ಯಾರು ಇದ್ದರು ಎಂದು ನನಗೆ ನೆನಪಿರುವುದಿಲ್ಲ. ಮೃತದೇಹವನ್ನು ಆಂಬ್ಯುಲೆನ್ಸ್ ಮೂಲಕ ಸಾಗಿಸಲಾಗಿರುತ್ತದೆ. ಶವ ಪರೀಕ್ಷಿಸಿದ ವೈದ್ಯರ ಹೆಸರು ನನಗೆ ನೆನಪಿರುವುದಿಲ್ಲ. ನಾನು ಚಾಸಾ-8 ರವರಿಗೆ ದೂರವಾಣಿ ಮುಖಾಂತರ ಕರೆ ಮಾಡಿರುವುದಿಲ್ಲ ಅಂದರೆ ಸರಿಯಲ್ಲ ಮತ್ತು ವಿಷಯ ತಿಳಿದ ತಕ್ಷಣ ಠಾಣೆಗೆ ಮಾಹಿತಿಯನ್ನು ತಿಳಿಸಿರುವುದಿಲ್ಲ ಅಂದರೆ ಸರಿಯಲ್ಲ. ನಿಪಿ-11 ಕ್ಕು ಈ ಪ್ರಕರಣಕ್ಕು ಸಂಬಂಧ ಇಲ್ಲ ಅಂದರೆ ಸರಿಯಲ್ಲ. ನಿಪಿ-10 ನ್ನು ಠಾಣೆಯಲ್ಲಿ ಬರೆಯಲಾಗಿದೆ ಅಂದರೆ ಸರಿಯಲ್ಲ. ನಿಪಿ-10 ಕ್ಕು ಮತ್ತು ನಿಪಿ-11 ಕ್ಕು ತಾಳೆಯಾಗುವುದಿಲ್ಲ ಅಂದರೆ ಸರಿಯಲ್ಲ. ಸುಮಾರು ಸಂಜೆ 4.00 ರಿಂದ 5.00 ಗಂಟೆ ಸಮಯದಲ್ಲಿ ಸ್ಥಳ ಪಂಚನಾಮೆ ಮಾಡಲಾಗಿರುತ್ತದೆ. ಚಾಸಾ-6 ರವರು ಪಂಚನಾಮೆ ಸಮಯದಲ್ಲಿ ಹಾಜರಿರಲಿಲ್ಲ ಅಂದರೆ ಸರಿಯಲ್ಲ. ಮಸೀದಿಯಲ್ಲಿ ಬೆಳಗ್ಗೆ 5.00 ಗಂಟೆ ಸಮಯಕ್ಕೆ ಬಾಂಗ್ ಆಗುತ್ತದೆ ಅಂದರೆ ಸರಿ. ಬೆಳಗಿನ ಜಾವ 5.00 ಗಂಟೆ ಸಮಯದಲ್ಲಿ ಬಾಂಗ್

ಆಗುವುದರಿಂದ ಚಾಸಾ-6 ರವರು ಆ ದಿನ ಘಟನಾ ಸ್ಥಳದಲ್ಲಿ ಇರುವುದಿಲ್ಲ ಅಂದರೆ ಸರಿಯಲ್ಲ. ಚಾಸಾ-5 ಮತ್ತು 6 ರವರ ಪರಿಚಯ ನನಗೆ ಇರುವುದಿಲ್ಲ. ಚಾಸಾ-1 ಮತ್ತು ಚಾಸಾ-8 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿ ವಿರುದ್ದ ಸುಳ್ಳು ಪ್ರಕರಣ ದಾಖಲಿಸಲಾಗಿರುತ್ತದೆ ಅಂದರೆ ಸರಿಯಲ್ಲ. ನಾನು ಆಗಾಗ ಚೆಕ್ ಪೋಸ್ಟ್ ನಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತೇನೆ ಅಂದರೆ ಸರಿ. ಅದೇ ರೀತಿ ಬಣಕಲ್ ಠಾಣೆಯ ಮುಂಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆ ಅಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿಯು ಹಣ ನೀಡದ ಕಾರಣ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳು ಅಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-xxx

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.